98 (205) ಶ್ರೀ ಸಿದ್ದು ನಾವದಿ (ಜಮಖಂಡಿ) ಮಾನ್ಯ ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ಇರುವ ಕಾರ್ಯಕ್ರಮಗಳು ಯಾವುವು ,

ಆ) ಈ ಎಲ್ಲಾ ಕಲ್ಯಾಣ ಕಾರ್ಯಕ್ರಮದಡಿ ಜಮಖಂಡಿ ತಾಲ್ಲೂಕಿನಲ್ಲಿ ಕೈಗೊಂಡ ಅಭಿವೃದ್ಧಿ ಕಾರ್ಯಗಳೆಷ್ಟು ,

ಇ) ಶಾದಿಮಹಲ್‌ಗಳನ್ನು ಕಟ್ಟಿಸಿಕೊಡಲು ಇರುವ ನಿಯಮಗಳೇನು ,

ಈ) ಕಳೆದ 5 ವರ್ಷಗಳಲ್ಲಿ ಜಮಖಂಡಿ ತಾಲ್ಲೂಕಿನಲ್ಲಿ ಕಟ್ಟಿಸಲಾದ ಶಾದಿಮಹಲ್‌ಗಳ ಸಂಖ್ಯೆ ಎಷ್ಟು ,

ಉ) ಜಮಖಂಡಿ ತಾಲ್ಲೂಕಿನಲ್ಲಿ ಅಲ್ಪಸಂಖ್ಯಾತರು ಹೆಚ್ಚಾಗಿದ್ದು ಇನ್ನೂ 6 ಶಾದಿಮಹಲ್‌ಗಳನ್ನು ನಿರ್ಮಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ,

ಊ) ಶಾದಿಮಹಲ್‌ನ್ನು 5 ಲಕ್ಷ ರೂಪಾಯಿಗಳಲ್ಲಿ ನಿರ್ಮಿಸಲು ಆಗದ ಕಾರಣ ಯುನಿಟ್ ಕಾಸ್ಟ್ ಅನ್ನು ಹೆಚ್ಚಿಸುವ ಯೋಜನೆ ಇದೆಯೇ ,

ಋ) ಹಾಗಿದ್ದಲ್ಲಿ, ಎಷ್ಟು ರೂ ಗಳಿಗೆ ಹೆಚ್ಚಿಸಲಾಗುವುದು?

ಶ್ರೀ ಇಕ್ಬಾಲ್ ಅನ್ಸಾರಿ (ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು)

ಅ) **ರಾಜ್ಯವಲಯ ಕಾರ್ಯಕ್ರಮ**

1 ಶಾದಿಹಲ್/ಸಮುದಾಯ ಭವನಗಳ ನಿರ್ಮಾಣ
2 ಅಲ್ಪಸಂಖ್ಯಾತರಿಗಾಗಿ ಹಾಸ್ಟೆಲ್ ಕಟ್ಟಡಗಳ ನಿರ್ಮಾಣ
3 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ನಿರ್ಮಾಣ
4 ಅಲ್ಪಸಂಖ್ಯಾತರ ಸಂಸ್ಥೆಗಳಿಂದ ವಿದ್ಯಾರ್ಥಿನಿಲಯ ಕಟ್ಟಡಗಳ ನಿರ್ಮಾಣ
5 ಅಲ್ಪಸಂಖ್ಯಾತರಿಗಾಗಿ ಪೀರ -
6 ಹೊಸ ಮೊರಾರ್ಜಿ ದೇಸಾಯಿ ನಿವಾಸಿ ಶಾಲೆಗಳು
7 ಅಲ್ಪಸಂಖ್ಯಾತರಿಗಾಗಿ ಕೌಶಲ್ಯ ಅಭಿವೃದ್ಧಿ ಯೋಜನೆ
8 ಸರ್ಕಾರಿ ಅಲ್ಪಸಂಖ್ಯಾತರ ಶಾಲೆಗಳಿಗೆ ಶಿಕ್ಷಣ ಕಲಿಕೆ ಸಾಧನೆಗಳು
9 ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ಉತ್ತೇಜನ

ಜಿಲ್ಲಾವಲಯ ಕಾರ್ಯಕ್ರಮಗಳು

1 ಅಲ್ಪಸಂಖ್ಯಾತರ ತರಬೇತಿ
2 ಅಲ್ಪಸಂಖ್ಯಾತರ ಹಾಸ್ಟೆಲ್‌ಗಳು
3 ಅಲ್ಪಸಂಖ್ಯಾತರ ಐಟಿಐ/ಡಿಪ್ಲೋಮಾ ವಿದ್ಯಾರ್ಥಿಗಳಿಗೆ ಶಿಷ್ಯವೇತನ
4 ಅಲ್ಪಸಂಖ್ಯಾತರ ಸಂಸ್ಥೆಗಳಿಂದ ನಡೆಸಲ್ಪಡುತ್ತಿರುವ ವಿದ್ಯಾರ್ಥಿನಿಲಯ
5 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು
6 ಅಲ್ಪಸಂಖ್ಯಾತರಿಗಾಗಿ ವೃತ್ತಿ ತರಬೇತಿ
7 ಅಲ್ಪಸಂಖ್ಯಾತರಿಗಾಗಿ ಅನಾಥಾಲಯಗಳು

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಅಲ್ಪಸಂಖಾತರ ಅಭಿವೃದ್ಧಿಗಾಗಿ ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ

1 ಸ್ವಾವಲಂಬನ ಸಾಲದ ಯೋಜನೆ
2 ಸಹಾಯಧನ ಯೋಜನೆ
3 ಅರಿವು (ವಿದ್ಯಾಭ್ಯಾಸ ಸಾಲದ) ಯೋಜನೆ
4 ಗಂಗಾ ಕಲ್ಯಾಣ ಯೋಜನೆ
5 ಶ್ರಮಶಕ್ತಿ ಯೋಜನೆ
6 ಭೂ ಖರೀದಿ ಯೋಜನೆ
7 ರಾಷ್ಟ್ರೀಯ ನಿಗಮದ ನೇರ ಸಾಲ ಯೋಜನೆ

ಉ) 1 ಜಮಖಂಡಿ ತಾಲ್ಲೂಕಿನಲ್ಲಿ ಹಳಂಗಳಿ ಹಾಗೂ ತೆರೆದ ಗ್ರಾಮದ ಅಲ್ಪಸಂಖ್ಯಾತರ 02 ಖಾನಗಿ ಅನುದಾನಿತ ಸಂಸ್ಥೆಯ ವಿದ್ಯಾರ್ಥಿಗಳ ಸಂಖ್ಯೆ 75

2 ತೆರದಾಳ ಗ್ರಾಮದಲ್ಲಿ ಅಲ್ಪಸಂಖ್ಯಾತರ ಐಟಿಐ/ಡಿಪ್ಲೋಮಾ ತರಬೇತಿಗೆ ಸಂಖ್ಯೆ 1

3 ಜಮಖಂಡಿ ತಾಲ್ಲೂಕಿನ ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ (ಉತ್ತೇಜನ) ತರಬೇತಿ ಭತ್ಯೆಗಾಗಿ ಆಯ್ಕೆ ಮಾಡಲಾದ ವಿದ್ಯಾರ್ಥಿಗಳ ಸಂ 08

4 ಜಮಖಂಡಿ ಟೌನ್ ಹಾಗೂ ತೇರದಾಳ ಗ್ರಾಮದಲ್ಲಿ ಅಲ್ಪಸಂಖ್ಯಾತರ ಶಾದಿಮಹಲ್ ನಿರ್ಮಾಣದ ಸಲುವಾಗಿ ತಲಾ ರೂ 5 00 ಲಕ್ಷದಂತೆ ಸಹಾಯಧನ ಬಿಡುಗಡೆ ಮಾಡಲಾಗಿದೆ 02 ಕಟ್ಟಡ ಪೂರ್ಣಗೊಂಡಿದೆ

ಜಮಖಂಡಿ ತಾಲ್ಲೂಕಿನಲ್ಲಿ 2006–07ನೇ ಸಾಲಿನಲ್ಲಿ ಒದಗಿಸಿರುವ ಸೌಲಭ್ಯಗಳ ವಿವರ ಈ ಕೆಳಕಂಡಂತಿವೆ

(ರೂ ಲಕ್ಷಗಳಲ್ಲಿ)

ಕ್ರ ಸಂ	ಯೋಜನೆ ಹೆಸರು	ಭೌತಿಕ	ಆರ್ಥಿಕ
1	ಸ್ವಾವಲಂಬನ, ಸಾಲದ ಯೋಜನೆ	49	5 50
2	ಸಹಾಯಧನ ಯೋಜನೆ	49	2 45
3	ಅರಿವು (ವಿದ್ಯಾಭ್ಯಾನ ಸಾಲದ) ಯೋಜನೆ	11	1 20
4	ಗಂಗಾ ಕಲ್ಯಾಣ ಯೋಜನೆ	62	31 12
5	ಶ್ರಮಶಕ್ತಿ ಯೋಜನೆ	–	–

ಇ) 1 ಸಂಸ್ಥೆಯು ನೊಂದಾಯಿತವಾಗಿರಬೇಕು

2 ಸಂಸ್ಥೆಯು ಸ್ವಂತ ಹೆಸರಿನಲ್ಲಿ ನಿವೇಶನ ಹೊಂದಿರಬೇಕು

3 ಅಲ್ಪಸಂಖ್ಯಾತರಿಗೆ ಶಾದಿಮಹಲ್ ನಿರ್ಮಾಣಕ್ಕಾಗಿ ಜಿಲ್ಲಾ ಕೇಂದ್ರ ಸ್ಥಾನಗಳಲ್ಲಿ ನಿರ್ಮಾಣವಾದ ಅಂದಾಜಿನ ಮೊತ್ತವು

4 ಜಿಲ್ಲಾ ಕೇಂದ್ರೇತರ ಸ್ಥಾನಗಳಲ್ಲಿ ಭವನಗಳ ನಿರ್ಮಾಣದ ಅಂದಾಜಿನ ಮೊತ್ತ ರೂ 20 00 ಲಕ್ಷಗಳಿಗಿಂತ ಕಡಿಮೆ ಇರಬಾರದು

5 ಕಟ್ಟಡ ನಕಾಶೆ ಮತ್ತು ಅಂದಾಜಿನ ಮೊತ್ತವನ್ನು ನೊಂದಾಯಿತ ಅಭಿಯಂತರರು/ಧೃಢೀಕೃತ ಅಭಿಯಂತರರು/ಅನುಮೋದಿತ ಮೌಲ್ಯ ಮಾವನಕಾರ ಪರವಾನಿಗೆ ಪಡೆದ ಅಭಿಯಂತರಿಂದ ದೃಢೀಕರಿಸಬೇಕು

6 ಜಿಲ್ಲಾ ಕೇಂದ್ರಗಳಲ್ಲಿ ಗರಿಷ್ಟ ರೂ 50 00 ಲಕ್ಷ ಹಾಗೂ ಇತರ ಸ್ಥಳಗಳಲ್ಲಿ ಗರಿಷ್ಟ ರೂ 20 00 ಲಕ್ಷ ಅನುದಾನವನ್ನು ಶಾದಿಮಹಲ್ ನಿರ್ಮಾಣಕ್ಕೆ ಮಂಜೂರು ಮಾಡಲಾಗುವುದು

1 ಎರಡು ಅಂದರೆ ಮೆಕ್ಕಾ ಮಸೀದಿ ವೆಂಡಾರ ಮೊಹಲ್ಲಾ ಜಮಖಂಡಿ ಈ ಸಂಸ್ಥೆಯವರಿಗೆ ರೂ 5 00 ಲಕ್ಷ ನಹಾಯಧನ ನೀಡಲಾಗಿದೆ

2 ಪೀರ ಅಬಾಕಾನ್ ಶಿಕ್ಷಣ ಸಂಸ್ಥೆ ತೇರದಾಳ ಈ ಸಂಸ್ಥೆಯವರಿಗೆ ರೂ 5 00 ಲಕ್ಷ ನಹಾಯಧನ ನೀಡಲಾಗಿದೆ

ಉ) ಅಲ್ಪಸಂಖ್ಯಾತರ ಮುಸ್ಲಿಂ ಜನಾಂಗದ ವತಿಯಿಂದ ಈಗಾಗಲೇ ಎರಡು ಶಾದಿಮಹಲ್ ನಿರ್ಮಾಣಗೊಂಡಿದ್ದು, ಹಾಗೂ ತೇರದಾಳ ಗ್ರಾಮದಲ್ಲಿ ಹೊಸದಾಗಿ ಎರಡು ಶಾದಿಮಹಲ್‌ಗಳ ಪ್ರಸ್ತಾವನೆಗಳು ಬಂದಿದ್ದು, ಸದರಿ ಪ್ರಸ್ತಾವನೆ ಪರಿಶೀಲಿಸಿ, ಜಿಲ್ಲಾಧಿಕಾರಿಗಳ ಶಿಫಾರಸ್ಸಿನೊಂದಿಗೆ ಈ ಕಛೇರಿಯಿಂದ ದಿನಾಂಕ 28 12 2006ರಂದು ಮಂಜೂರಾತಿಗಾಗಿ ನಿರ್ದೇಶನಾಲಯಕ್ಕೆ ಬಂದಿರುತ್ತದೆ ಶಾದಿಮಹಲ್ ನಿರ್ಮಾಣಕ್ಕಾಗಿ ಹೆಚ್ಚಿನ ಪ್ರಸ್ತಾವನೆಗಳು ಬಂದಲ್ಲಿ ನಿಮಾನುಸಾರ ಪರಿಶೀಲಿಸಿ ಅನುದಾನ ಮಂಜೂರು ಮಾಡಲಾಗುವುದು

ಊ) ಸರ್ಕಾರದ ಆದೇಶ ಸಂ. ಸಕಇ 91/ಅಸಂಯೋ 2006, ಬೆಂಗಳೂರು, ದಿನಾಂಕ 17 07 2006ರ ಆದೇಶದಲ್ಲಿ ಶಾದಿಮಹಲ್/ಸಮುದಯ ಭವನಕ್ಕೆ ನೀಡುವ ಅನುದಾನವನ್ನು ಹೆಚ್ಚಿಸಲಾಗಿದೆ

ಋ) ಜಿಲ್ಲಾ ಕೇಂದ್ರಗಳಲ್ಲಿ ರೂ 50 00 ಲಕ್ಷ ಮೀರದಂತೆ ಹಾಗೂ ಇತರೆ ತಾಲ್ಲೂಕುಗಳಲ್ಲಿ ರೂ 20 00 ಲಕ್ಷ ಮೀರದಂತೆ ಹೆಚ್ಚಿಸಲಾಗಿದೆ